ಕಥೆ



ದುರುಗೇಶ ಅಂಕುಂ

ಕಲೆ: ವಿಶ್ವನಾಥ್ ಎ.ಎಸ್

# ಹಂಪಿ ಎಕ್ಸ್‌ಪ್ರೆಸ್

ಬಿಸಿಲ ಝಳಪಿಗೆ ಕುತ್ತಿಗೆಯ ತುಂಬಾ ಅಂಟು ಬೆವರು ಅಂಟಿಕೊಂಡಿತ್ತು. ಇದನ್ನು ಬದಲಿಸಲು ಎದ್ದರೆ ನಿದ್ದೆಯಲ್ಲ ಕೆಡುತ್ತದೆ ಎಂದು ಹೊರಳು ಬದಲಿಸಿ ನಿಂಗರಾಜು ಮಲಗುತ್ತಾನೆ. ಆದರೆ, ಹೊರಳು ಬದಲಿಸಿದಾಗ ಮುಖ ಗೋಡೆಗೆ ಎದುರಾಗುತ್ತದೆ. ನಿದ್ದೆ ಸಾಗುತ್ತಾ ಪಕ್ಕದ ಗೋಡೆಗೆ ಮೂಗು ತಾಕಿದಾಗ ತಾನು ಸಮಾಧಿಯಲ್ಲಿರುವಂತೆ ಅನ್ನಿಸಿ ಎಚ್ಚರಗೊಳ್ಳುತ್ತಾನೆ. ಹಾಗೆ ಎಚ್ಚರಗೊಂಡ ಅವನಿಗೆ ಬರೀ ಕತ್ತಲೆ, ಗುಯ್‌ಗುಟ್ಟುವ ಗುಂಗಡಿಗಳು ಬಿಟ್ಟರೆ ಬೇರೇನೂ ಇಲ್ಲ ಇಲ್ಲಿ ಎಂಬುದು ಅರ್ಥವಾಗುತ್ತದೆ. ಪಕ್ಕದ ಗಡಿಗೆಯಲ್ಲಿ ನೀರು ಕುಡಿದು ಹೊರಗೆ ಕಾಲಿಟ್ಟಾಗ, ಜಾತ್ರೆಯಿಂದ ಸುಸ್ತುಗೊಂಡು ಬಂದು ಮಲಗಲು ಹಾತೊರೆಯುವ ಮಗುವಿನಂತೆ ಇಡೀ ಹೊಸಪೇಟೆ ಕಾಣುತ್ತದೆ. ಮಹಡಿಯ ಮನೆ, ಅದರಿಂದ ಮೆಟ್ಟಿಲಿಂದ ಕೆಳಗಿಳಿದು ಬಂದು ಸಂತೆ ಮಾರ್ಕೆಟ್ ರಸ್ತೆಯಿಂದ ಬಲಬದಿಯ ರಸ್ತೆಯಿಂದ ಎರಡು ಕಿ.ಮೀ. ದೂರವಿರುವ ರೈಲ್ವೆ ಸ್ಟೇಷನ್‌ಗೆ ನಡೆದೇ ತಲುಪುತ್ತಾನೆ. ಇವನು ಬರುವುದನ್ನು ನೋಡುತ್ತಾ ನಿರುಮ್ಮಳವಾದ ವಿಠಲನು ಬೇಗಬೇಗ ಲೋಟ ತೊಳೆದು ಇಡಲು ಪ್ರಾರಂಭಿಸಿದ. ಇವನ ನೋಡಿ ತಾನು ಲೋಟ ತೊಳೆದಿರುವುದನ್ನು ತೋರಿಸಿದ. ಪಾಳೆಯ ಮುಗಿಸಿ ಒಪ್ಪಿಸಿರುವ ಸಂಕೇತವದು. ಖಾಲಿ ಗಲ್ಲಾಪೆಟ್ಟಿಗೆಯ ತೋರಿಸಿ, 'ಈ ವಾರದಿಂದ ರೇವಣಕರರು ಗಾಡಿ ಬಾಡಿಗೆ 150ಕ್ಕೆ ಏರಿಸ್ಯಾರೊ ನಿಂಗ' ಎಂದ ವಿಠಲನ ಕಡೆಗೆ ಹುಬ್ಬೇರುವಂತೆ ನೋಡಿ, ತನ್ನ ರಬ್ಬರು ಚಪ್ಪಲಿ ಹಾಕಿಕೊಂಡು ಎಳೆದುಕೊಂಡು ಹೋದ. ಅವನು ಹೋಗುತ್ತಿರುವುದನ್ನು ಗಮನಿಸಿದಾಗ ಸ್ವಾತಂತ್ರ್ಯ ಸಿಕ್ಕ ಖುಷಿ ಅವನ ಹೆಜ್ಜೆಗಳಲ್ಲಿ ಇರುವುದನ್ನು ಗಮನಿಸುವುದು ನಿಂಗನಿಗೆ ಅಭ್ಯಾಸವಾಗಿ ಹೋಗಿತ್ತು. ಪ್ರತಿದಿನವೂ ರಾತ್ರಿ 7.30ಕ್ಕೆ ಆರಂಭವಾಗುವ ತನ್ನ ಪಾಳೆಯ ಬೆಳಗ್ಗೆ 7ಕ್ಕೆ ಮುಗಿಸಿದಾಗ ಆಗುವ ಬಿಡುಗಡೆ ಭಾವದಲ್ಲಿ ಅವನಿಗೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ದಿನಕ್ಕಿಂತಲೂ ಹೆಚ್ಚು ಖುಷಿಯಾಗುತ್ತಿತ್ತು. ಹೊಸಪೇಟೆ ಸಮೀಪದ ಕಲ್ಲಿರಂಪುರದ 90 ಸೆಂಟ್ಸ್‌ಗಳ ಭೂಮಿಯಲ್ಲಿ ಶೇಂಗಾ ಬೆಳೆದು ಜೀವನ ಮಾಡುತ್ತಿದ್ದ ತಂದೆ-ತಾಯಿಗೆ ಅಣ್ಣ, ದಿಢೀರನೆ ಕೊನೆ ಓಣಿಯ ಹುಡುಗಿಯನ್ನು ಹಾರಿಸಿಕೊಂಡು